ಶ್ರೀ ಐ.ಎಂ. ಜಯರಾಮಶೆಟ್ಟಿ : ಈ 1.8.97ಕ್ಕೆ ಗ್ರಾಮ ಪಂಚಾಯತಿಯಾಗಿ ಘೋಷಣೆ ಮಾಡಿದ್ದೇವೆಂದು ನನಗೆ ರಿಪ್ಲೈ ಕೊಟ್ಟಿದ್ದೀರಿ. ಆದರೆ ನೀವು ಅದರ ಬಗ್ಗೆ ಏನೂ ಹೇಳಿಲ್ಲ. ನಾನು ಕೂಡ ಇಲ್ಲಿ ಪ್ರಸ್ತಾಪ ಮಾಡಿದ್ದೆ.

ಉಪಾಧ್ಯಕ್ಷರು : ತಾವು ಅರ್ಥ ಮಾಡಿಕೊಳ್ಳಬೇಕು. ಸಂಬಂಧಿಸಿದ ಮಂತ್ರಿಗಳು ಇಲ್ಲ. ನಿಮಗೆ ಉತ್ತರ ಒದಗಿಸಿಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಐ.ಎಂ. ಜಯರಾಮ ಶೆಟ್ಟಿ : ಸಮಂಜಸವಾದಂತಹ ಉತ್ತರ ಇಲ್ಲ.

(ಗೊಂದಲ)

ಉಪಾಧ್ಯಕ್ಷರು : ಇದು ಶೂನ್ಯ ವೇಳೆ, ತಾವು ಅರ್ಥ ಮಾಡಿಕೊಳ್ಳಬೇಕು.

ಆಲಮಟ್ಟಿ ಜಲಾಶಯದ ಹಿನ್ನೆಲೆಯಲ್ಲಿ ಬೀಳಗಿ, ಜಮಖಂಡಿ, ಬಸವನಬಾಗೇವಾಡಿ ಇತರೆ ತಾಲ್ಲೂಕಿನಲ್ಲಿ ಬೆಳೆದು ನಿಂತಿರುವ ಬೆಳೆಗಳ ಹಾನಿ.

+ ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಆಲ್ಮಟ್ಟಿ ಜಲಾಶಯದ ಹಿನ್ನೆಲೆಯಲ್ಲಿ ಬೀಳಗಿ ತಾಲ್ಲೂಕಿನ ಕೃಷ್ಣಾ ಹಾಗೂ ಘಟಪ್ರಭ ನದಿಯ ದಂಡೆಗುಂಟ ಬೀಳಗಿ ತಾಲ್ಲೂಕಿನಲ್ಲಿ ಅಂದಾಜು 40 ಹಳ್ಳಿಗಳು, ಬೀಳಗಿ ಕ್ಷೇತ್ರದ ಜಮಖಂಡಿ ತಾಲ್ಲೂಕಿನ 10 ಹಳ್ಳಿಗಳು, ಅದರ ಜೊತೆಗೆ ಬಸವನ ಬಾಗೇವಾಡಿ, ವಿಜಾಪುರ ತಾಲ್ಲೂಕಿನ 14-15 ಹಳ್ಳಿಗಳು. ಅಂದಾಜು ನಾಲ್ಕರಿಂದ ಐದು ಸಾವಿರ ಎಕರೆ ಕ್ಷೇತ್ರದಲ್ಲಿ ಬೆಳೆದು ನಿಂತ ಬೆಳೆಗಳಾದ ಕಬ್ಬು, ತೋಟಗಾರಿಕೆ ಬೆಳೆಗಳು, ಹತ್ತಿ, ಗೋವಿನ ಜೋಳ, ಸೋಯಾಬೀನ್ ಎಲ್ಲಾ ಮುಳುಗಡೆ ಆಗಿ ಕನಿಷ್ಟ ಹತ್ತರಿಂದ ಹದಿನೈದು ಕೋಟಿ ರೂಪಾಯಿ ಹಾನಿ ಆಗಿದೆ. ಇದು ಪ್ರಕೃತಿ ವಿಕೋಪದಿಂದ ಆದದ್ದು ಅಲ್ಲ. ಸ್ಪಷ್ಟವಾಗಿ ಈ ವರ್ಷ ಆಲಮಟ್ಟಿ ಜಲಾಶಯದ ಹಿನ್ನೆಲೆಯಲ್ಲಿ ಮುಳುಗಡೆ ಆಗುತ್ತದೆ ಎಂದು ಹೇಳಿದ್ದರೂ ಸಹ ಆ ಭೂಮಿ ಸರ್ವೆ ಮಾಡಿಲ್ಲ. ಅದರ ಜೊತೆಗೆ ಇನ್ನೂವರೆಗೆ ಪರಿಹಾರವನ್ನೂ ಕೊಟ್ಟಿಲ್ಲ. ಇದರಿಂದ ಇದು ಸ್ಪಷ್ಟವಾಗಿ ಈ ಕೃಷ್ಣಾ ಭಾಗ್ಯ ಜಲ ನಿಗಮದವದ್ದೇ ತಪ್ಪು ಇರಬಹುದು ಅಥವಾ ಈ ಆರ್ ಅಂಡ್ ಆರ್ ಅಧಿಕಾರಿಗಳವರದ್ದೇ ತಪ್ಪು ಇರಬಹುದು. ಅದಕ್ಕೆ ಬೆಳೆದು ನಿಂತ ಕ್ರಾಪ್ಟಿಗೆ ಏನು ಹಾನಿ ಆಗಿದೆ ಅದರ ಬಗ್ಗೆ ಸರ್ಕಾರ ಆಗಲೀ ಅಥವಾ ಕೃಷ್ಣಾ ಜಲ ಭಾಗ್ಯ ನಿಗಮದವರು ಆಗಲಿ, ಏನು ಲಾಸ್ ಆಗಿದೆ. ಅದನ್ನು ತಿಂಬಿಕೊಡಬೇಕೆಂದು ಹೇಳಿ ನಾನು ಸರ್ಕಾರದವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ರೈತರು ಮತ್ತು ಸಂಕಷ್ಟಕ್ಕೆ ಳಗಾಗಿರತಕ್ಕಂಥ ಜನಗಳ ನೆರವಿಗೆ ಬರತಕ್ಕದ್ದು ನಮ್ಮ ಕರ್ತವ್ಯ ಮತ್ತು ಧರ್ಮ. ಈಗ ತಮಗೆ ತ್ತಿರುವ ಹಾಗೆ ಈ ಕೃಷ್ಣಾ ನೀರಾವರಿಗೆ ಸಂಬಂಧಪಟ್ಟ ಹಾಗೆ ಒಬ್ಬ ಉತ್ತಮವಾಗಿರತಕ್ಕ ಧಿಕಾರಿಯನ್ನು ಅಲ್ಲಿಗೆ ಹಾಕಿದ್ದೇವೆ. ಶ್ರೀಮಾನ್ ಜಾಮ್‌ದಾರ್ ಎನ್ನುವ ಅಧಿಕಾರಿ. ಅವರು ಎಲ್ಲಾ ಮ್ಮ ಗಮನಕ್ಕೆ ಬಂದಿರತಕ್ಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯತಕ್ಕದ್ದನ್ನು ಅವರ ಹಂತದಲ್ಲಿ

ಮಾಡಿದ್ದಾರೆ. ಯಾವುದು ಆಗುವುದಿಲ್ಲ. ಅದನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳಿಸಿ ಅದನ್ನು ನಾವು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಪಾಟೀಲ್‌ರವರು ಏನು ಹೇಳಿದ್ದಾರೆ. ಇದನ್ನು ನಾನು ಮತ್ತು ಸಂಬಂಧಪಟ್ಟ ಮಂತ್ರಿಗಳು ಕುಳಿತು ಅವರನ್ನೂ ಕರೆಸಿ ಆ ಸಮಸ್ಯೆಗೆ ಆದಷ್ಟು ಬೇಗ ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇದು ಒಂದು ದಿನದ್ದು ಸಮಸ್ಯೆಯಲ್ಲ ಬಹಳ ದಿನಗಳಿಂದ ಇರತಕ್ಕದ್ದು, ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಚಿಕ್ಕನಾಯಕನ ಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸ್ವಂತ ಕಟ್ಟಡ

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಚಿಕ್ಕನಾಯಕನಹಳ್ಳಿಯಲ್ಲಿ ಸರ್ಕಾರಿ ಪದವಿ ಕಾಲೇಜು, ಸರ್ಕಾರಿ ಕಿರಿಯ ಕಾಲೇಜು ಕಟ್ಟಡದಲ್ಲಿ ನಡೆಯುತ್ತಿತ್ತು. ಈಗ ಮಾನ್ಯ ಗೋವಿಂದೇಗೌಡರ ಆದೇಶದಂತೆ ಕಿರಿಯ ಕಾಲೇಜನ್ನು ಬೆಳಿಗ್ಗೆ 10.30ರಿಂದ ಮಧ್ಯಾಹ್ನ 4.30ರವರೆಗೆ ನಡೆಸಬೇಕು ಎಂದು ಹೇಳಿ ಸರ್ಕಾರ ತೀರ್ಮಾನ ಮಾಡಿದೆ. ಹಾಗೆ ತೀರ್ಮಾನ ಮಾಡಿರುವುದರಿಂದ ಸರ್ಕಾರೀ ಪದವಿ ಪೂರ್ವ ಕಾಲೇಜು ನಡೆಸಲಿಕ್ಕೆ ಕಟ್ಟಡವೇ ಇಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ಅಲ್ಲಿ 1992-93ನೇ ಇಸವಿಯಿಂದ ಪ್ರಥಮ ದರ್ಜೆ ಕಾಲೇಜು ಕಟ್ಟಡ ಅರ್ಧ ಆಗಿ ಉಳಿದಿದೆ. ಈ ಕಟ್ಟಡ ಏನಾದರೂ ಕಂಪ್ಲೀಟ್ ಮಾಡಿ ಕೊಡುತ್ತೀರಾ? ಏಕೆಂದರೆ ಪದವಿ ಪೂರ್ವ ಕಾಲೇಜಿನ ಎ ಮಕ್ಕಳೂ ಶಾಲೆಗೆ ಹೋಗಲಿಕ್ಕೆ ತೊಂದರೆ ಆಗಿ, ಕಾಲೇಜನ್ನೇ ಆರಂಭ ಮಾಡಿಲ್ಲ. ಅಲ್ಲಿ ಸೈನ್ಸ್ ಫ್ಯಾಕಲ್ಟಿ ಕೂಡ ಆರಂಭ ಆಗಿದೆ. ಕನಿಷ್ಟ ಮೂರು ರೂಮ್ 1992-93ರಲ್ಲಿ ಆರಂಭ ಆಗಿತ ಏನಾದರೂ ಮಾಡಿ, ಅರ್ಧ ರೂಫ್ ಆಗಿದೆ. ಒಂದು ರೂಮಿನಲ್ಲಿ ಅರ್ಧ ರೂಫ್ ಹಾಕಿ ಬಿಟ್ಟಿದ್ದಾರೆ ನಾವೇನಾದರೂ ಕೇಳಿದರೆ ಎಲ್ ಓಸಿ ಕೊಡುವುದಿಲ್ಲ ನಾವು ಕಷ್ಟಪಟ್ಟು ಎಲ್ ಓಸಿ ತೆಗೆದುಕೊಂಡು ಬರುತ್ತೇವೆ, ನಮ್ಮ ಪ್ರಿಯಾರಿಟೀಸ್ ಬೇರೆ ಎಂದು ಅಲ್ಲಿನ ಎಕ್ಸಿಕ್ಯೂಟೀವ್ ಇಂಜಿನಿಯರ್ ಹೇಳುತ್ತಾರೆ ಆ ಪ್ರಿಯಾರಿಟಿ ಏನಾದರೂ ಶಿಫ್ ಮಾಡಿ ಈ ಕಾಲೇಜು ಕಟ್ಟಡವನ್ನು ಕಂಪ್ಲೀಟ್ ಮಾಡಿಸಿಕೊಂಡುತ್ತೀರಾ ಮತ್ತು ಮಕ್ಕಳು ಏನಾದರೂ ರೋಡಿಗೆ ಇಳಿಯುವುದನ್ನು ತಪ್ಪಿಸುತ್ತೀರಾ ಎಂದು ಸರ್ಕಾರವನ್ನು ಕೇಳಬಯಸುತ್ತೇನೆ.

4.10 ಪಿಎಂ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಎಲ್‌ಒಸಿ ರಿಲೀಸ್ ಮಾಡುವುದರಲ್ಲಿ ಯಾರೂ ಸಹಿತ ಕಷ್ಟಪಡ ಅವಶ್ಯಕತೆ ಇಲ್ಲ. ಸರ್ಕಾರ ತನ್ನ ಬಜೆಟ್‌ನಲ್ಲಿ ಹೇಳಿರುವುದು ಕೇವಲ ಒಂದು ಎಸ್ಟಿಮೇಟ್, ಬಿಡುಗಡೆ ಮಾಡುವುದು ಫಂಡ್ ಅವೇಲಬಿಲಿಟಿ ಮೇಲೆ ಡಿಪೆಂಡ್ ಆಗುತ್ತದೆ. ಮಾಧುಸ್ವಾಮಿಯವರ ಜಿನೈನ್ ಪ್ರಾಬ್ಲಂ ಬಿಲ್ಡಿಂಗ್ ಪ್ರಾಬ್ಲಂ, ಅದು ಅರ್ಧಕ್ಕೆ ನಿಂತುಹೋಗಿದೆ. ಅವರಿಗೆ ಮುಖ್ಯವಾಗಿ ಬೇಕಾಗಿರುವುದು ಹಣಕಾಸು ಸಚಿವರು ಸ್ವಲ್ಪ ಹಣ ಬಿಡುಗಡೆ ಮಾಡಿದರೆ ರೂಫ್ ಹಾಕಿ ಅದನ್ನ ಕಂಪ್ಲೀಟ್ ಮಾಡಿದರೆ ಜ್ಯೂನಿಯರ್ ಫಸ್ಟ್‌ಗ್ರೇಡ್ ಕಾಲೇಜು ನಡೆಯಬಹುದು ಎನ್ನತಕ್ಕಂಥಾ ಇದೆ. ಅದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಮ್ಮ ಹಣ ಇತಿಮಿತಿಯಲ್ಲಿ ಅವಶ್ಯಕತೆ ಎಷ್ಟು ಎಂಬುದನ್ನು ತಿಳಿದುಕೊಂಡು ಆದಷ್ಟೂ ಅವರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.